# ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ

**DR. SHIVARAMA KARANTHA PILIKULA NISARGA DHAMA**

ಆಡಳಿತ ಕಛೇರಿ, ಮೂಡುಶೆಡ್ಡೆ ಅಂಚೆ, ಮಂಗಳೂರು – 575 028, ದೂ : 0824 – 2263565 ಫ್ಯಾಕ್ಸ್ : 2263562

Administrative Office, Moodushedde Post, Mangaluru – 575 028 Ph : 0824- 2263565 Fax : 2263562

**Website:** www.pilikula.com **Email:** pilikula96@gmail.com


ನಂ.ಪಿಎನ್‌ಡಿ.ಸಿಆರ್.192/2018–19 ದಿನಾಂಕ: 14–02–2019

## ಅಲ್ಪಾವಧಿ ಟೆಂಡರ್ ಪ್ರಕಟಣೆ

ರಾಷ್ಟ್ರೀಯ ಹೆದ್ದಾರಿ 169 (ಹಿಂದೆ ರಾ.ಹೆ ನಂ.13) ರ ವಾಮಂಜೂರಿನಿಂದ ಮೂಡುಶೆಡ್ಡೆಯ ಡಾ.ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮಕ್ಕೆ (ಡಾ.ಶಿ.ಕಾ.ಪಿ.ನಿ.ಧಾ) ಸಾಗುವ ಚತುಷ್ಪಥ ರಸ್ತೆಯ (ವಾಮಂಜೂರಿನಲ್ಲಿ) ಸಿದ್ಧಪಡಿಸಿದ ತಾಂತ್ರಿಕ ವಿಶೇಷಣೆಗಳಿಗೆ ಅನುಗುಣವಾಗಿ ಸ್ವಾಗತ ಫಲಕವನ್ನು ಹಾಗೂ ವಾಮಂಜೂರಿನಿಂದ ಪಿಲಿಕುಳದವರೆಗೆ ರಸ್ತೆಯ ವಿಭಾಜಕಗಳಲ್ಲಿ ಅಲ್ಲಲ್ಲಿ ಸೂಚನಾ ಫಲಕಗಳನ್ನು ಲೋಕೋಪಯೋಗಿ ನಿಯಮಗಳಿಗೆ ಅನುಸಾರವಾಗಿ ಪಿಪಿಪಿ (Public Private Partnership) ಮಾದರಿಯಲ್ಲಿ ಅಳವಡಿಸಿ, ನಿರ್ವಹಿಸಿಕೊಂಡು ನಿಗಧಿತ ಅವಧಿ ಮುಗಿದ ಕೂಡಲೇ ಸಂಸ್ಥೆಗೆ ವರ್ಗಾವಣೆ ಮಾಡುವ (Build Operate Transfer) ಆಧಾರದಲ್ಲಿ ಆಸಕ್ತಿಯುಳ್ಳ ಏಜೆನ್ಸಿ/ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರನ್ನು ಕರೆಯಲಾಗಿದೆ.

| ಕ್ರ.ಸಂ | ಕೆಲಸದ ವಿವರ | ಅಂದಾಜು ಮೊತ್ತ ಲಕ್ಷಗಳಲ್ಲಿ | ಇ.ಎಮ್.ಡಿ ರೂ.ಗಳಲ್ಲಿ | ಟೆಂಡರ್ ನಮೂನೆ ಶುಲ್ಕ ರೂ.ಗಳಲ್ಲಿ | ಕೆಲಸ ಮುಗಿಸಬೇಕಾದ ಅವಧಿ |
|---|---|---|---|---|---|
| 1 | ಎಮ್.ಎಸ್. ಸ್ಟೀಲ್ ಮತ್ತು ಎಸಿಪಿ ಶೀಟ್‌ನಿಂದ ಶಕ್ತಿಯುತವಾಗಿ ದೃಶ್ಯ ಪರಿಣಾಮದೊಂದಿಗೆ ವಾಮಂಜೂರು ಜಂಕ್ಷನ್‌ನಲ್ಲಿ ಪಿಲಿಕುಳಕ್ಕೆ ಸಾಗುವ ಚತುಷ್ಪಥ ರಸ್ತೆಯಲ್ಲಿ ಸ್ವಾಗತ ಫಲಕವನ್ನು ಹಾಗೂ ವಾಮಂಜೂರಿನಿಂದ ಪಿಲಿಕುಳಕ್ಕೆ ಸಾಗುವ ರಸ್ತೆಯ ವಿಭಾಜಕಗಳಲ್ಲಿ ಆಯ್ದ ದೂರಗಳಿಗೆ ಅನುಗುಣವಾಗಿ ಸೂಚನಾಫಲಕವನ್ನು ಅಳವಡಿಸುವುದು. (ಮಾದರಿ ನಕ್ಷೆ ಮತ್ತು ತಾಂತ್ರಿಕ ವಿವರಣೆ ಲಗತ್ತಿಸಿದೆ). | 4.99 | 12,500.00 | 1,500.00 | 1 ತಿಂಗಳು |

ಷರತ್ತುಗಳು.

1. ಟೆಂಡರ್ ಅರ್ಜಿ ಸಲ್ಲಿಸಬಯಸುವವರು ಟೆಂಡರ್ ಅರ್ಜಿಯನ್ನು **ದಿನಾಂಕ:22–02–2019 ರಿಂದ ದಿನಾಂಕ: 28–02–2019 ಸಂಜೆ 3:00** ಗಂಟೆಯೊಳಗೆ ಕಛೇರಿ ವೇಳೆಯಲ್ಲಿ ಕಛೇರಿಯಿಂದ ಪಡೆಯಬಹುದು.
2. ಟೆಂಡರ್ ಅರ್ಜಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 28–02–2019, ಸಮಯ ಸಂಜೆ: 4:00 ಗಂಟೆವರೆಗೆ**
3. ಟೆಂಡರ್ ಅರ್ಜಿಯನ್ನು ತೆರೆಯುವ **ದಿನಾಂಕ: 28–02–2019, ಸಮಯ ಸಂಜೆ: 4:30 ಗಂಟೆಗೆ**
4. ತಾಂತ್ರಿಕ ವಿಶೇಷಣೆಗಳಿಗೆ ಅನುಗುಣವಾಗಿ ಸ್ವಾಗತ ಫಲಕವನ್ನು ಹಾಗೂ ವಾಮಂಜೂರಿನಿಂದ ಪಿಲಿಕುಳದವರೆಗೆ ಅಲ್ಲಲ್ಲಿ ಸೂಚನಾ ಫಲಕಗಳನ್ನು ರಸ್ತೆಯ ವಿಭಾಜಕಗಳಲ್ಲಿ ಅಳವಡಿಸಲು ಲೋಕೋಪಯೋಗಿ ನಿಯಮಗಳಿಗೆ ಅನುಸಾರವಾಗಿ ಪಿಪಿಪಿ (Public Private Partnership) ಮಾದರಿಯಲ್ಲಿ ಅಳವಡಿಸಿ, ನಿರ್ವಹಿಸಿಕೊಂಡು ನಿಗಧಿತ ಅವಧಿ ಮುಗಿದ ಕೂಡಲೇ ಸಂಸ್ಥೆಗೆ ವರ್ಗಾವಣೆ ಮಾಡುವ (Build Operate Transfer) ಆಧಾರದಲ್ಲಿ ಟೆಂಡರ್ ಕರೆಯಲಾಗಿದೆ.
5. ಉಪಯೋಗಿಸಬೇಕಾದ ಜಾಹೀರಾತು ಫಲಕಗಳ ಹಾಗೂ ಕಮಾನು ಫಲಕಗಳ ವಿನ್ಯಾಸ, ಅಳತೆ ಹಾಗೂ ತಾಂತ್ರಿಕ ವಿಶೇಷಣೆಗಳನ್ನು **ಅನುಬಂಧ 1** ರಲ್ಲಿ ನೀಡಲಾಗಿದೆ.

6. ಆರ್ಥಿಕ ಬಿಡ್ (Price bid) ನಮೂನೆಯನ್ನು **ಅನುಬಂಧ 2** ರಲ್ಲಿ ನೀಡಲಾಗಿದ್ದು ಅದನ್ನು ಸ್ಪಷ್ಟವಾಗಿ ಭರ್ತಿ ಮಾಡುವುದು.
7. ಟೆಂಡರ್ ಅರ್ಜಿ ಸಲ್ಲಿಸಬಯಸುವವರು ಕಾರ್ಯನಿರ್ವಾಹಕ ನಿರ್ದೇಶಕರು, ಡಾ.ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ (Executive Director, Dr.Shivarama Karantha Pilikula Nisarga Dhama) ಇವರ ಹೆಸರಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಮೇಲೆ ತಿಳಿಸಿದ ಪ್ರಕಾರ ಡಿಡಿ ಯನ್ನು ಇಎಮ್‌ಡಿ ರೂಪದಲ್ಲಿ ಟೆಂಡರ್‌ನೊಂದಿಗೆ ಲಗತ್ತಿಸಬೇಕು.
8. ಟೆಂಡರ್ ಅರ್ಜಿ ಸಲ್ಲಿಸಬಯಸುವವರು ಈ ರೀತಿಯ ಕೆಲಸಗಳನ್ನು ಮಾಡಿ ನಿರ್ವಹಿಸಿರುವ ಕುರಿತು ಸಂಬಂಧಪಟ್ಟ ಸಂಸ್ಥೆಯಿಂದ ಪಡೆದ ಅನುಭವ ಪತ್ರವನ್ನು ಟೆಂಡರ್‌ನೊಂದಿಗೆ ಲಗತ್ತಿಸತಕ್ಕದ್ದು.
9. ಟೆಂಡರ್ ಅರ್ಜಿ ಸಲ್ಲಿಸಬಯಸುವವರು 2013–14 ರಿಂದ 2017–18ರ ಅವಧಿಯಲ್ಲಿ ಕನಿಷ್ಠ 2 ವರ್ಷಗಳಲ್ಲಿ ವಾರ್ಷಿಕ ರೂ.15.00 ಲಕ್ಷಗಳ ವಹಿವಾಟು (Turnover) ಇಂತಹ ಕೆಲಸಗಳಲ್ಲಿ ಮಾಡಿದ ಬಗ್ಗೆ ಲೆಕ್ಕ ಪರಿಶೋದಕರಿಂದ ಪಡೆದ ದಾಖಲೆಗಳನ್ನು ಸಲ್ಲಿಸಬೇಕು.
10. ಅಲ್ಲದೇ ಕಳೆದ 2 ವರ್ಷಗಳ ಲೆಕ್ಕ ಪರಿಶೋದಕರಿಂದ ಪಡೆದ ಆಯವ್ಯಯ ಪಟ್ಟಿ (Balance sheet) ನ್ನು ಸಲ್ಲಿಸಬೇಕು.
11. ಟೆಂಡರ್ ಅರ್ಜಿ ಸಲ್ಲಿಸಬಯಸುವವರು ಮೇಲಿನ ಕೆಲಸಗಳ ತಾಂತ್ರಿಕತೆ ಹಾಗೂ ಅಳವಡಿಸಬೇಕಾದ ಕ್ರಮಗಳ ಬಗ್ಗೆ ಕಛೇರಿಯ ಅಧಿಕೃತ ಅಭಿಯಂತರರಿಂದ ವಿವರಗಳನ್ನು ಪಡೆದು ಟೆಂಡರ್ ಅರ್ಜಿಯನ್ನು ಸಲ್ಲಿಸಬೇಕು.
12. ಯಶಸ್ವಿ ಟೆಂಡರ್‌ದಾರರು ಮೇಲಿನ ಕೆಲಸಗಳನ್ನು ಡಾ.ಶಿ.ಕಾ.ಪಿ.ನಿ.ಧಾಮದಿಂದ ಸೂಚಿಸಿದ ರೀತಿಯಲ್ಲಿ ಸ್ವಾಗತ ಫಲಕ ಮತ್ತು ಸೂಚನಾ ಫಲಕವನ್ನು ರಚಿಸಿ, ಅಳವಡಿಸಿ ಸೂಚಿಸುವ ಬಣ್ಣದಲ್ಲೇ ಬರೆದು ಅಳವಡಿಸತಕ್ಕದ್ದು.
13. ಮೇಲಿನಂತೆ ಅಳವಡಿಸಬೇಕಾದ ಜಾಹೀರಾತು ಫಲಕಗಳ ಅನುಮತಿ ಇತ್ಯಾದಿಗಳ ವೆಚ್ಚವನ್ನು ಡಾ.ಶಿ.ಕಾ.ಪಿ.ನಿ.ಧಾಮದ ವತಿಯಿಂದಲೇ ಭರಿಸಲಾಗುವುದು.
14. **ಸೂಚನಾ ಫಲಕದ ಇನ್ನೊಂದು ಭಾಗದಲ್ಲಿ ಯಶಸ್ವಿ ಟೆಂಡರ್‌ದಾರರು ಅವರ ವತಿಯಿಂದ ವಾಣಿಜ್ಯ ಜಾಹೀರಾತನ್ನು ಅಳವಡಿಸಬಹುದು. ಆದರೆ ಈ ರೀತಿಯ ವಾಣಿಜ್ಯ ಜಾಹೀರಾತನ್ನು ಟೆಂಡರ್ ಅನುಮೋದಿಸಿದ ಅವಧಿಯವರೆಗೆ ಮಾತ್ರ ನೀಡಲಾಗುವುದು.**
15. ಸೂಚನಾ ಫಲಕಗಳಲ್ಲಿ ವಾಮಂಜೂರಿನಿಂದ ಪಿಲಿಕುಳಕ್ಕೆ ಸಾಗುವಾಗ ಮುಂಭಾಗದಲ್ಲಿ ಶೇಕಡಾ 90 ರಷ್ಟು ಪಿಲಿಕುಳದ ಜಾಹೀರಾತುಗಳಿರಬೇಕು. ಸೂಚನಾ ಫಲಕದ ಹಿಂಬದಿಯಲ್ಲಿ ಶೇಕಡಾ 90ರಷ್ಟು ಜಾಹೀರಾತುಗಳನ್ನು ಯಶಸ್ವಿ ಟೆಂಡರ್‌ದಾರರು ಅಳವಡಿಸಬಹುದು.
16. ಟೆಂಡರ್ ಸಲ್ಲಿಸಬಯಸುವವರು ಈ ಕೆಲಸವನ್ನು ಮಾಡಲು ಹೊಂದಿರುವ ಅರ್ಹತೆಯ ಕುರಿತು ಅವರಲ್ಲಿರುವ ದಾಖಲೆಗಳು, ಉಪಕರಣಗಳು, ತಾಂತ್ರಿಕತೆ, ತಂತ್ರಜ್ಞರ ಕುರಿತು ವಿವರಗಳನ್ನು ಟೆಂಡರ್‌ನೊಂದಿಗೆ ಸಲ್ಲಿಸುವುದು.
17. **ಟೆಂಡರ್‌ನಲ್ಲಿ ಜಾಹೀರಾತು ಪ್ರದರ್ಶನ ಅವಧಿಯನ್ನು ಯಾರು ಕಡಿಮೆ ಅವದಿಗೆ ಸೂಚಿಸುವರೋ ಅವರನ್ನು ಇತರ ತಾಂತ್ರಿಕ ಅರ್ಹತೆಯ ಕುರಿತು ಪರಿಶೀಲಿಸಿ ಯಶಸ್ವಿ ಟೆಂಡರ್‌ದಾರರೆಂದು ಘೋಷಿಸಲಾಗುವುದು.**
18. ಯಶಸ್ವಿ ಟೆಂಡರ್‌ದಾರರು ಈ ಅಧಿಕೃತ ಫಲಕಗಳ ನಿರ್ವಹಣೆಯನ್ನು ಕಾಲಕಾಲಕ್ಕೆ ಡಾ.ಶಿ.ಕಾ.ಪಿ.ನಿ.ಧಾಮವು ಸೂಚಿಸಿದಂತೆ ನಿರ್ವಹಿಸತಕ್ಕದ್ದು. ಅಲ್ಲದೇ ರಸ್ತೆಯ ಅಭಿವೃದ್ಧಿ ಕೆಲಸಗಳಾಗುವಾಗಲೂ ಅಗತ್ಯತೆಗೆ ಅನುಸಾರವಾಗಿ ಅಭಿವೃದ್ಧಿ ಪಡಿಸುವುದು, ಸ್ಥಳಾಂತರಿಸುವುದು ಇತ್ಯಾದಿಗಳನ್ನು ಅನುಮತಿ ಮೇರೆಗೆ ನಿರ್ವಹಿಸತಕ್ಕದ್ದು.
19. ಯಶಸ್ವಿ ಟೆಂಡರ್‌ದಾರರಿಂದ ಸೂಚನಾ ಫಲಕಗಳ ಹಿಂಬದಿಯಲ್ಲಿ ಪ್ರಕಟಿಸುವ ಜಾಹೀರಾತುಗಳು ಡಾ.ಶಿ.ಕಾ.ಪಿ.ನಿ.ಧಾಮ ವ್ಯವಸ್ಥೆಗೆ ಪ್ರತಿಕೂಲವಾಗಿ ಅಥವಾ ಸಾರ್ವಜನಿಕರಿಗೆ ತಪ್ಪು ಮಾಹಿತಿ ನೀಡುವಂತಿರಬಾರದು. ಜಾಹೀರಾತುಗಳನ್ನು ಅಳವಡಿಸುವ ಮೊದಲು ಡಾ.ಶಿ.ಕಾ.ಪಿ.ನಿ.ಧಾಮದಿಂದ ಅನುಮೋದಿಸಲ್ಪಡಬೇಕು.
20. ಮೇಲಿನ ಕೆಲಸಗಳನ್ನು ನಿರ್ವಹಿಸುವ ಮೊದಲು ಸಂಬಂದ್ಧಪಟ್ಟ ಸ್ಥಳೀಯ ಸಂಸ್ಥೆಗಳಿಂದ ಅನುಮತಿಯನ್ನು ಡಾ.ಶಿ.ಕಾ.ಪಿ.ನಿ.ಧಾಮದ ವತಿಯಿಂದ ಪಡೆಯಲಾಗುವುದು ಹಾಗೂ ಸಂಬಂಧಪಟ್ಟ ತೆರಿಗೆಯನ್ನು ಪಾವತಿಸಲಾಗುವುದು.
21. ಮೇಲಿನ ಫಲಕಗಳಿಗೆ ಯಾವುದೇ ರೀತಿಯಲ್ಲಿ ಹಾನಿವುಂಟಾದ್ದಲ್ಲಿ ಅದರ ನಷ್ಟ ಭರ್ತಿ ಬಗ್ಗೆ ಯಶಸ್ವಿ ಟೆಂಡರ್‌ದಾರರು ಕ್ರಮ ಜರಗಿಸಿ ಸರಿಪಡಿಸಿಕೊಳ್ಳಬೇಕು. ಡಾ.ಶಿ.ಕಾ.ಪಿ.ನಿ.ಧಾಮದಿಂದ ಈ ರೀತಿಯ ವೆಚ್ಚ ಭರಿಸಲು ಅವಕಾಶವಿರುವುದಿಲ್ಲ.
22. ಟೆಂಡರ್ ಕರಾರನ್ನು ನಿಗಧಿ ಪಡಿಸಿದ ಅವಧಿಯಲ್ಲಿ ನಿಲ್ಲಿಸಲು ಅವಕಾಶವಿಲ್ಲ ಆದರೆ ಉಭಯತ್ರರರು 3 ತಿಂಗಳ ಮುಂಗಡ ನೋಟೀಸು ನೀಡಿ ಪರಸ್ಪರ ಒಪ್ಪಿಗೆಯಾದಲ್ಲಿ ಮಾತ್ರ ನಿಲ್ಲಿಸಬಹುದಾಗಿದೆ.

23. ಯಶಸ್ವಿ ಟೆಂಡರ್‌ದಾರರಿಗೆ ಅವರ ವತಿಯಿಂದ ಮಾಡುವ ಜಾಹೀರಾತು ಇರಲಿ/ಇಲ್ಲದಿರಲಿ ನಿರ್ವಹಣೆ ಮಾತ್ರ ಮಾಡಬೇಕು.
24. ಯಶಸ್ವಿ ಟೆಂಡರ್‌ದಾರರು ಕಾರ್ಯಾದೇಶ ನೀಡಿದ 1 ವಾರದೊಳಗೆ ಭದ್ರತಾ ಠೇವಣಿ ರೂ.1.00 ಲಕ್ಷ ಮೊಬಲಗನ್ನು ಡಿಡಿ/ ಚೆಕ್ ಮುಖಾಂತರ ನೀಡತಕ್ಕದ್ದು.
25. ಈ ಟೆಂಡರನ್ನು ಅಂತಿಮವಾಗಿ ಸ್ವೀಕರಿಸುವ ಅಥವಾ ರದ್ದುಗೊಳಿಸುವ ಅಧಿಕಾರವು ಕಾರ್ಯನಿರ್ವಾಹಕ ನಿರ್ದೇಶಕರು, ಡಾ.ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ ಇವರು ಹೊಂದಿರುತ್ತಾರೆ.

ಕಾರ್ಯನಿರ್ವಾಹಕ ನಿರ್ದೇಶಕರು

# ಟೆಂಡರು ನಮೂನೆ

| | | |
|---|---|---|
| 1 | ಟೆಂಡರುದಾರರ ಹೆಸರು | |
| 2 | ವಿಳಾಸ | |
| 3 | ದೂರವಾಣಿ ಸಂಖ್ಯೆ: | |
| 4 | ಇ–ಮೇಲ್ | |
| 5 | ಪಾನ್ ನಂಬರ್ | |
| 6 | ಜಿಎಸ್‌ಟಿ ನೋಂದಾವಣಿ ಸಂಖ್ಯೆ | |
| 7 | ಟ್ರೇಡ್ ಲೈಸನ್ಸ್ ಸಂಖ್ಯೆ | |
| 7 | ಅನುಭವ | |
| 8 | ಇ.ಎಮ್.ಡಿ ಮೊಬಲಗು ಮತ್ತು ಡಿಡಿ. ನಂಬ್ರ | |
| 09 | ಟೆಂಡರ್ ಸಲ್ಲಿಸಿದ ಕೆಲಸದ ವಿವರ | ಒಪ್ಪಿದ ಆರ್ಥಿಕ ಬಿಡ್<br>ಅಂದರೆ ಟೆಂಡರ್ ಸಲ್ಲಿಸಿದ ಕೆಲಸವನ್ನು ಟೆಂಡರ್ ಶರ್ತಗಳಂತೆ ನಿರ್ವಹಿಸಿ ಜಾಹೀರಾತುಗಳ ಫಲಕಗಳ ಹಿಂಭಾಗದಲ್ಲಿ ಪ್ರದರ್ಶಿಸುವ ಒಟ್ಟು ಅವಧಿ (ತಿಂಗಳುಗಳಲ್ಲಿ) |
| | ಎಮ್.ಎಸ್. ಸ್ಟೀಲ್ ಮತ್ತು ಎಸಿಪಿ ಶೀಟ್‌ನಿಂದ ಶಕ್ತಿಯುತವಾಗಿ ದೃಶ್ಯ ಪರಿಣಾಮದೊಂದಿಗೆ ವಾಮಂಜೂರು ಜಂಕ್ಷನ್‌ನಲ್ಲಿ ಪಿಲಿಕುಳಕ್ಕೆ ಸಾಗುವ ಚತುಷ್ಪಥ ರಸ್ತೆಯಲ್ಲಿ ಸ್ವಾಗತ ಫಲಕವನ್ನು ಹಾಗೂ ವಾಮಂಜೂರಿನಿಂದ ಪಿಲಿಕುಳಕ್ಕೆ ಸಾಗುವ ರಸ್ತೆಯ ವಿಭಾಜಕಗಳಲ್ಲಿ ಆಯ್ದ ದೂರಗಳಿಗೆ ಅನುಗುಣವಾಗಿ ಸೂಚನಾಫಲಕವನ್ನು ಅಳವಡಿಸುವುದು. | –––––– ತಿಂಗಳುಗಳು<br>(ಅಂಕೆಯಲ್ಲಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸುವುದು) |

ಟೆಂಡರ್ ನಿಯಮಗಳನ್ನು ಮತ್ತು ಷರತ್ತುಗಳನ್ನು ಚೆನ್ನಾಗಿ ಓದಿ ತಿಳಿದುಕೊಂಡು ಒಪ್ಪಿದ್ದೇನೆ. ಷರತ್ತುಗಳಲ್ಲಿ ಹೇಳಿರುವ ದಾಖಲಾತಿಯನ್ನು ಇದರೊಂದಿಗೆ ಸಲ್ಲಿಸಿರುತ್ತೇನೆ.

ಟೆಂಡರುದಾರರ ಸಹಿ
ದಿನಾಂಕ:

ಲಗತ್ತಿಸಬೇಕಾದ ದಾಖಲೆಗಳು

1. ಪಾನ್ ಕಾರ್ಡು ಪ್ರತಿ
2. ಜಿಎಸ್‌ಟಿ ನೋಂದಾವಣಿ ಪ್ರತಿ
3. ಅನುಭವ ಪತ್ರದ ಪ್ರತಿ, ಉಪಕರಣಗಳು, ತಾಂತ್ರಿಕತೆ, ತಂತ್ರಜ್ಞರ ಕುರಿತು ವಿವರಗಳು
4. ಟ್ರೇಡ್ ಲೈಸನ್ಸ್ ಪ್ರತಿ
5. ಲೆಕ್ಕ ಪರಿಶೋದಕರಿಂದ ಪಡೆದ ಕಳೆದ ಎರಡು ವರ್ಷಗಳ(2016–17, 2017–18) ಆಯವ್ಯಯ ಪಟ್ಟಿ (Balance sheet).
6. ಕಳೆದ ಐದು ವರ್ಷಗಳಲ್ಲಿ (2013–14 ರಿಂದ 2017–18) ಎರಡು ವರ್ಷಗಳಲ್ಲಿ ವಾರ್ಷಿಕ ರೂ.10.00 ಲಕ್ಷಗಳ ವಹಿವಾಟು (Turnover) ಮಾಡಿದ ಬಗ್ಗೆ ಲೆಕ್ಕ ಪರಿಶೋದಕರಿಂದ ಪಡೆದ ದಾಖಲೆ.